3	Agricultural Income Tax	2.05
4	Profession Tax	215.96
5	Entry Tax	463.21
6	**Total Commercial Taxes**	**7039.33**
7	State Excise	1870.59
8	M.V. Taxes	707.18
9	Stamps and Reg. Fees	1348.97
10	Land Revenue	80.59
11	Taxes and Duties on Electricity	27.70
	Total all Taxes	11074.36

b) When compared to last 3 years the maximum tax collections are made up to the end of December 2004.

1	2	3	4	5	6
		Apr-01to Dec-2001	Apr-02 to Dec-2002	Apr-03 to Dec-2003	Apr-04 to Dec-04
1	Sales Tax	3836.46	3984.32	4801.33	6147.64
2	Entertainment Tax, Luxury Tax and Betting Tax	108.99	105.41	129.56	210.47
3	Agricultural Income Tax	2.37	0.73	1.01	2.05
4	Profession Tax	131.19	142.26	188.90	215.96
5	Entry Tax	373.22	371.42	485.46	463.21
6	**Total Commercial Taxes**	**4452.23**	**4604.14**	**5606.26**	**7039.33**
7	State Excise	1360.44	1412.08	1616.66	1870.59
8	M.V. Taxes	439.64	467.29	571.70	707.18
9	Stamps and Reg. Fees	679.21	857.59	913.27	1348.97
10	Land Revenue	30.89	42.28	45.89	80.59
11	Taxes and Duties on Electricity	5.72	8.32	13.61	27.70
	Total all Taxes	6968.13	7391.70	8767.39	11074.36

c) This has never been tried

d) No such proposal is there

121(670) ಶ್ರೀ ಪಾಟೀಲ್ ಡಿ.ಆರ್. (ಗದಗ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಈ ಮೊದಲು ಕೊಡುತ್ತಿದ್ದ ತಹಸೀಲ್ದಾರ್ ಕಛೇರಿಯಿಂದ ವಾರಸುದಾರರ ಸರ್ಟಿಫಿಕೇಟ್ ಕೊಡಲಾಗುತ್ತಿದ್ದ ಪದ್ಧತಿಯನ್ನು ಈಗ ನೀಡಲಾಗಿದೆಯೇ;

ಆ) ಇದರಿಂದ ಬಹಳಷ್ಟು ಕುಟುಂಬಗಳಿಗೆ ಅನಾವಶ್ಯಕವಾಗಿ ನ್ಯಾಯಾಲಯಕ್ಕೆ ಹೋಗಿ ವಾರಸುದಾರರ ಸರ್ಟಿಫಿಕೇಟ್ ಪಡೆದುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದ್ದು ಇದರಿಂದ ಸಂಬಂಧಿಸಿದವರಿಗೆ ಆರ್ಥಿಕ ಹಾಗೂ ಮಾನಸಿಕ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಈ ಹಿಂದೆ ನೀಡಿದ್ದ ಭರವಸೆಯಂತೆ, ಜನಪರವಾಗಿದ್ದ ಮೊದಲಿದ್ದ ಪದ್ಧತಿ ಮತ್ತೇ ಜಾರಿಗೆ ಬಂದಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಇದನ್ನು ಜಾರಿಗೊಳಿಸಲು ಇರುವ ತೊಂದರೆಗಳೇನು;

ಉ) ಅದನ್ನು ನಿವಾರಿಸಿ ಜನರಿಗೆ ಅನುಕೂಲವಾಗುವ ಪದ್ಧತಿ ಜಾರಿಗೆ ತರಲಾಗುವುದೇ?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ಸರ್ಕಾರಿ ನೌಕರರಲ್ಲದವರಿಗೆ ಉತ್ತರಾಧಿಕಾರಿ ಪ್ರಮಾಣ ಪತ್ರಗಳನ್ನು ಸರ್ಕಾರದಿಂದ ನೀಡುವುದಿಲ್ಲ. ಆದರೆ ಸಂಬಂಧಿತ ನ್ಯಾಯಾಲಯಗಳು ಇಂತಹ ಪ್ರಮಾಣ ಪತ್ರಗಳನ್ನು ನೀಡುವ ಅಧಿಕಾರ ಹೊಂದಿರುತ್ತವೆ.

ಆ) ಬಂದಿರುತ್ತದೆ.

ಇ) ಬಂದಿರುತ್ತದೆ.

ಈ) ಉತ್ತರಜೀವಿತ ಪ್ರಮಾಣ ಪತ್ರ ನೀಡುವ ಸಂದರ್ಭದಲ್ಲಿ ಕೆಳಕಾಣಿಸಿದ ಕಾಯ್ದೆಗಳನ್ನು ಪರಿಶೀಲಿಸುವುದು ಅವಶ್ಯಕವಾಗಿರುತ್ತದೆ. ಆದಕಾರಣ ಕಾನೂನು ಇಲಾಖೆಯ ಅಭಿಪ್ರಾಯ ಪಡೆಯಲಾಗುತ್ತಿದೆ.

1) ಹಿಂದೂ ಪರ್ಸನಲ್ ಲಾ
2) ಕ್ರಿಶ್ಚಿಯನ್ ಪರ್ಸನಲ್ ಲಾ
3) ಮುಸ್ಲಿಂ ಪರ್ಸನಲ್ ಲಾ
4) ಸ್ಪೆಷಲ್ ಮ್ಯಾರೇಜ್ ಆಕ್ಟ್
5) ಇಂಡಿಯಲ್ ಸಕ್ಸೆಸೆನ್ ಆಕ್ಟ್
6) ಜನನ ಮತ್ತು ಮರಣ ನೋಂದಣಿ ಕಾಯ್ದೆ

ಉ) ಕಾನೂನು ಇಲಾಖೆಯ ಅಭಿಪ್ರಾಯ ಬಂದ ನಂತರ ಪರಿಶೀಲಿಸಲಾಗುವುದು.

122(487) ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಗ್ರಾಮಲೆಕ್ಕಾಧಿಕಾರಿಗಳಿಗೆ ಗ್ರಾಮಸಹಾಯಕರ ಅವಶ್ಯಕತೆ ಇದೆಯೇ?

ಆ) ಅವಶ್ಯಕತೆ ಇದ್ದರೆ ಹಾಲಿ ಇದ್ದ ಗ್ರಾಮಸಹಾಯಕರನ್ನು ಖಾಯಂಗೊಳಿಸಲಾಗುವುದೇ?

ಇ) ಹಾಗಿದ್ದಲ್ಲಿ ಇಲ್ಲಿಯವರೆಗೆ ಖಾಯಂಗೊಳಿಸದಿರಲು ಕಾರಣಗಳೇನು? ಈ ಬಗ್ಗೆ ಕೋರ್ಟುಗಳ ಆದೇಶವಿದ್ದರೆ ವಿವರ ನೀಡುವುದು?